MYSORE LEGISLATIVE ASSEMBLY

Wednesday, 2nd March 1966.

The House met in the Assembly Chamber, Vidhana Soudha, Bangalore, at Nine of the Clock.

MR. SPEAKER (SRI B. VAIKUNTA BALIGA, B.A., B.L.) in the Chair.

STARRED QUESTIONS

(to which oral answers were given)

Completion of Phodi Work

*Q.—4. Sri T. MADAIAH GOWDA (Ramanagaram).—

Will the Government be pleased to state :—

(*a*) out of 760 cases of lands granted in Ramanagaram Taluk not Pakka phoded, last year, how many are now phoded, as promised by the Government to complete the work early ;

(*b*) if there is any delay, the reason for the same ;

(*c*) whether any special arrangements are made for the completion of this work ?

A.—Sri M. V. KRISHNAPPA (Minister for Revenue).—

(*a*) In 291 cases Pakka phodi work has been completed. 320 cases have been referred to the Revenue Department for sanction of excess extent, change of spot, etc.

118 cases have been referred to the special party office, Kanakapura Taluk, 31 cases are pending for Pakka phodi work.

(*b*) There is no delay. Every endeavour is made to complete the work as early as possible.

(*c*) With a view to completing the work early, the work is entrusted to a special party. Instructions have been issued to the officers concerned to complete the work as early as possible.

ಶ್ರೀ ಟಿ. ಮಾದಯ್ಯಗೌಡ.—ಮಂಜೂರಾತಿಯನ್ನು ಕೋರಿ 320 ಪ್ರಕರಣಗಳನ್ನು ಕಂದಾಯ ಇಲಾಖೆಗೆ ಕಳುಹಿಸಿದ್ದು ರೆಗ್ಯುಲರೈಜ್ ಮಾಡುವುದು ಏತಕ್ಕೆ ಸಾಧಕಾಶವಾಗಿದೆ ?

ಶ್ರೀ ಎಂ. ವಿ. ಕೃಷ್ಣಪ್ಪ.—ಈ 760 ಕೇಸುಗಳ ಬಗ್ಗೆ ಹಿಂದಕ್ಕೆ ಪ್ರಶ್ನೆ ಮಾನ್ಯ ಸದಸ್ಯರು ಹಾಕಿದಾಗ್ಯೆ ವಾಗ್ದಾನ ಮಾಡಿದ ಮೇಲೆ 291 ಪ್ರಕರಣಗಳ ಪರ್ಕಾ ಪೋಸ್ತು ಮಾಡುವ ಕಾರ್ಯವು ಮುಗಿದಿದೆ. 320 ಪ್ರಕರಣಗಳನ್ನು ಕಂದಾಯ ಇಲಾಖೆಗೆ ಕಳುಹಿಸಿ ಕೊಡಲಾಗಿದೆ. ಕೆಲವು ಕಡೆ ಎರಡು ಎಕರೆ ಸ್ಯಾಂಕ್ಷನ್ ಆಗಿದ್ದರೂ ಕೂಡ ರೈತರು ಮೂರು ನಾಲ್ಕು ಎಕರೆ ಉತ್ತುಕೊಂಡು ಬಿಟ್ಟಿದ್ದಾರೆ. ಅದನ್ನು ರೆಗ್ಯುಲರೈಜ್ ಮಾಡಬೇಕಾಗಿದೆ. ಅದಕ್ಕಾಗಿ ಅಲ್ಲಿ ಗೋಮಾಳ ಸಾಕಷ್ಟು ಇದೆಯೇ ಇಲ್ಲವೇ ಎಂಬುವನ್ನು ಸಂಬಂಧಪಟ್ಟ ಅಧಿಕಾರಿಗಳು ನೋಡಿ ಮಾಡಬೇಕಾಗುತ್ತದೆ. ಆದುದರಿಂದ ಇದು ಸ್ವಲ್ಪ ವಿಳಾನವಾಗಿದೆ.

ಶ್ರೀ ಟಿ. ಮಾದಯ್ಯಗೌಡ.—320 ಪ್ರಕರಣಗಳಲ್ಲಿ ರೈತರಿಗೆ ಜಮೀನು ಕೊಟ್ಟಾಗ ಅಲ್ಲಿ ಸಾಕಷ್ಟು ಗೋಮಾಳ ಇವೆಯೇ, ಇದ್ದರೆ ಎಷ್ಟು ಇದೆ ಎಂಬುದನ್ನು ನೋಡಿಕೊಳ್ಳದೆ ಕೊಟ್ಟುಬಿಟ್ಟಿರುವುದಿಲ್ಲ. ಆದುದರಿಂದ ರೆವೆನ್ಯೂ ಡಿಪಾರ್ಟ್‌ಮೆಂಟ್ ರೆಗ್ಯುಲರೈಜ್ ಮಾಡುವುದನ್ನು ಏತಕ್ಕಾಗಿ ಸಾವಕಾಶ ಮಾಡುತ್ತಾರೆ ?

ಶ್ರೀ ಎಂ. ವಿ. ಕೃಷ್ಣಪ್ಪ.—ಭೂಮಿ ಕೊಟ್ಟ ಮೇಲೆ ಅನೇಕ ಕಡೆ ಗ್ರ್ಯಾಂಟ್ ಆಗಿರುತ್ತವೆ. ಸಾಧ್ಯವಾದಷ್ಟು ಬೇಗ ಈ ಕೆಲಸ ಮಾಡಲು ಬರೆಯುತ್ತೇವೆ.

ಶ್ರೀ ಸಿ. ಆರ್. ರಂಗೇಗೌಡ.—320 ಪ್ರಕರಣಗಳನ್ನು ಕಂದಾಯ ಇಲಾಖೆಗೆ ಕಳುಹಿಸಿ ಕೊಟ್ಟಿದೆ. ರೈತರು ಆಕ್ರಮಿಸಿಕೊಂಡು ಬಿಟ್ಟಿರುವುದನ್ನು ಚೇಂಜ್ ಮಾಡಬೇಕಾಗಿದೆ ಎಂದು ಹೇಳಿದರು. ದಖಾರ್‌ನ್ನು ಮಂಜೂರು ಮಾಡುವಾಗ್ಯೆ ಸರ್ವೆಯಾಗಿರುತ್ತದೆ. ರಿಕಾರ್ಡು ಸರಿಯಾಗಿ ಇರುತ್ತದೆಯಲ್ಲವೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಆ ರೀತಿ ಮಾಡುವ ಕ್ರಮ ಒಳ್ಳೆಯದು, ಆದರೆ ಅದು ಸಾಧ್ಯವಾಗುತ್ತಿಲ್ಲ. ಕೆಲವು ಕೇಸುಗಳಲ್ಲಿ 10-15 ವರ್ಷಗಳವರೆಗೆ ಪ್ರಕರಣ ನಡೆದದ್ದು ಇದೆ.

ಶ್ರೀ ಬಿ. ಚೆನ್ನಬೈರೇಗೌಡ.—ರೈತರು ಮೂರು ನಾಲ್ಕು ಎಕರೆ ಭೂಮಿ ಸಾಗುವಳಿ ಮಾಡಿಕೊಂಡು ಬಿಟ್ಟಿದ್ದಾರೆ ಎಂದು ಹೇಳಿದರು. ರೈತರು ಹೆಚ್ಚಿಗೆ ಭೂಮಿ ಉತ್ತುಕೊಂಡಿರುವುದನ್ನು ಸರಕಾರ ಗುರಿಸಿಕೊಳ್ಳುತ್ತದೆಯೇ ಅಥವಾ ರೈತರಿಗೆ ಮಂಜೂರು ಮಾಡಿ ಬಿಟ್ಟುಕೊಡುತ್ತಾರೆಯೇ ?

ಶ್ರೀ ಎಂ.ವಿ. ಕೃಷ್ಣಪ್ಪ.—ಸಾಮಾನ್ಯವಾಗಿ ಅದನ್ನು ರೈತರಿಗೆ ಮಂಜೂರು ಮಾಡಿಕೊಡಲಾಗುತ್ತದೆ. ಎಷ್ಟು ಭೂಮಿ ಉತ್ತುಕೊಂಡಿರುತ್ತಾರೆ ಎಂಬುದನ್ನು ನೋಡಿಕೊಂಡು ಶೇಕಡ 90 ರಷ್ಟು ಕೇಸುಗಳಲ್ಲಿ ಭೂಮಿ ಅವರಿಗೇ ಬಿಟ್ಟುಕೊಡುತ್ತೇವೆ. ಒಂದು ವೇಳೆ ಅಂಥ ಭೂಮಿಯಲ್ಲಿ ದಾರಿ ಅಥವಾ ಕಾಲುವೆ ಬರತಕ್ಕದ್ದು ಇದ್ದರೆ ಅದನ್ನು ಸರಕಾರ ಯೋಚನೆ ಮಾಡುತ್ತದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಇವುಗಳನ್ನು ರೆಗ್ಯುಲರೈಜ್ ಮಾಡುವುದಕ್ಕೆ ಅಲ್ಲಿ ಫೀಲ್ಡ್‌ನಲ್ಲಿ ಕೆಲಸ ಮಾಡತಕ್ಕ ಸರ್ವೆ ಡಿಪಾರ್ಟ್‌ಮೆಂಟಿನವರ ನಂಖ್ಯೆ ಕಡಿಮೆ ಇರುವುದು ಈ ಕೆಲಸ ಪೂರ್ತಿ ಮಾಡುವುದಕ್ಕೆ ತಡವಾಗಿರುವುದು ಮುಖ್ಯ ಕಾರಣವಲ್ಲವೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಅದೇ ಮುಖ್ಯವಾದ ಕಾರಣ. ಅಲ್ಲಿ ಕಡಿಮೆ ಸ್ಟಾಫ್ ಇರುವುದರಿಂದ ಫೋಡಿ ಕೆಲಸ ಬಹಳ ಉಳಿದಿದೆ. ಈ ರೀತಿ ಅನೇಕ ತಾಲ್ಲೂಕುಗಳಲ್ಲಿದೆ. ಸರ್ವೆ ಸೆಟ್ಲ್‌ಮೆಂಟ್‌ಮಾಡಿ ಅದರ ಮುಖೇನ ಕಂದಾಯ ಜಾಸ್ತಿ ಮಾಡುವ ಜಂತ್ರಿ ಪತ್ರ ತಯಾರ್ಮಾಡಬೇಕಾಗಿದೆ. ಕ್ಲಾಸಿಫಿಕೇಷನ್ ಮಾಡಿ ಜಂತ್ರಿ ಪಟ್ಟಿ ಇಂಡಿವಿಜ್ಯುಯಲ್ ಫಾರ್ಮರ್ ಹೆಸರಿನಲ್ಲಿ ಎಂಟರ್ ಮಾಡತಕ್ಕದ್ದು ಆಗುತ್ತದೆ. ಈ ಸರ್ವೆ ಕೆಲಸ ಮಾಡುವುದಕ್ಕೆ ಜನ ಕಡಿಮೆ ಇರುವುದರಿಂದ ಈಗ 300 ಜನರನ್ನು ಹೆಚ್ಚಿಗೆ ತೆಗೆದುಕೊಂಡು ಟ್ರೈನಿಂಗ್ ಕೊಡಲಾಗುತ್ತಿದೆ. ಇನ್ನು ಐದಾರು ತಿಂಗಳಿನಲ್ಲಿ ಕೆಲಸ ಮುಗಿಯಬಹುದು.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಯಾವ ಯಾವ ತಾಲ್ಲೂಕಿನಲ್ಲಿ ಎಷ್ಟೆಷ್ಟು ಕೆಲಸ ಬಾಕಿ ಉಳಿದಿದೆ ಎಂಬುದನ್ನು ಪರಿಶೀಲನೆ ಮಾಡಿ ಇದಕ್ಕಾಗಿ ಸ್ಪೆಷಲ್ ಸ್ಟಾಫ್ ನೇಮಕ ಮಾಡಿ ಕೆಲಸ ಪೂರ್ತಿ ಮಾಡುವ ಪದ್ಧತಿ ಇಲ್ಲವೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಸ್ಟಾಫ್ ವಿಷಯ ನಾನು ಹೇಳಿದೆ. ಸ್ಟಾಫ್ ಕಡಿಮೆ ಇದ್ದು ಕೆಲಸ ಜಾಸ್ತಿ ಇದೆ. ಆದುದರಿಂದ ಕೆಲಸ ವಿಳಾನವಾಗಿದೆ. ಸ್ಪೆಷಲ್ ಸ್ಟಾಫ್ ನೇಮಕ ಮಾಡಬೇಕೆಂದು ಪಿ.ಎಸ್.ಸಿ.ಗೆ ಬರೆದು ಬಹಳ ದಿವಸವಾಯಿತು. ಅವರು ಇನ್ನೂ ನೇಮಕ ಮಾಡಿಲ್ಲ. ನಾವು ಅದನ್ನು ಬಿಟ್ಟಿಲ್ಲ. ಜಂಪರಾಯಾಗಿ ಜಂತ್ರಿ ಪಟ್ಟಿ ತಯಾರು ಮಾಡುವುದಕ್ಕಾಗಿ 300-400 ಜನರನ್ನು ಕಾನೂನು ವಿರೋಧವಾಗಿ ಅಪಾಯಿಂಟ್‌ಮೆಂಟ್ ಮಾಡುವ ಪರಿಸ್ಥಿತಿ ಬಂದಿದೆ.

ಶ್ರೀ ಬಿ. ಬೈರವಾಚಾರಿ.—ಈ ಕೆಲಸ ನಿಧಾನವಾಗಿ 10-15 ವರ್ಷ ಹೋಗಿ ಕೆಲಸ ಮಾಡದೆ ಒಬ್ಬ ರೈತನ ಜಮೀನನ್ನು ಇನ್ನೊಬ್ಬ ರೈತನು ಸಾಗುವಳಿಮಾಡಿ ಅದನ್ನು ತೀರ್ಮಾನ ಮಾಡುವುದ ಕ್ಕಾಗಿ ಕೋರ್ಟ್ ಕಚೇರಿ ಕಚ್ಚೆ ಹತ್ತುವ ಸ್ಥಿತಿ ಬಂದಿದೆ. ಇದನ್ನು ತಪ್ಪಿಸಲು ಆದಷ್ಟು ಬೇಗ ಈ ಕೆಲಸ ಮೊದಲು ಮಾಡಲು ಸರಕಾರ ಪ್ರಯತ್ನ ಮಾಡುತ್ತದೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಒಬ್ಬರ ಜಮೀನು ಇನ್ನೊಬ್ಬರು ಮಾಡುವ ಈ ಒಳ್ಳೆ ಗುಣ ರೈತರಲ್ಲಿ ಇದೆ. ಸಾಧ್ಯವಿದ್ದಷ್ಟು ಬೇಗ ಈ ಕೆಲಸ ಮುಗಿಸಲು ಪ್ರಯತ್ನ ಮಾಡುತ್ತೇವೆ.

Grant of Land to Political Sufferers.

*Q.—33. Sri H. D. DEVE GOWDA (Holenarasipur).—

Will the Government be pleased to state :—

(*a*) whether it is fact that four political sufferers have given darkhast applications for the grant of lands in Taragalale and Sulagodu villages in Arkalgud Taluk, Hassan District;

(*b*) if so, the date on which the darkhast applications were submitted to the Taluk Office ;

(*c*) the reasons for not disposing of the same so far;

(*d*) whether they would take action to sanction the same at least now ?

A.—Sri M. V. KRISHNAPPA (Minister for Revenue).—

(*a*) Yes.

(*b*) 15th January 1959.

(*c*) The lands have been granted to them on 25th January 1966.

(*d*) Does not arise in view of the reply to clause(*c*).

ಶ್ರೀ ಎಚ್. ಡಿ. ದೇವೇಗೌಡ.—ನಾನು ಈ ಉಪ ಪ್ರಶ್ನೆಗಳನ್ನು ಕೇಳುವುದಿಲ್ಲ.

Vacancies in Primary Schools.

*Q.—40. Sri S. A. VASANNA SHETTY (Saklespur).—

Will the Government be pleased to state :—

(*a*) the number of vacancies in the various Primary Schools in Saklespur and Alur Taluks at present ;

(*b*) the date from which each of these vacancies are not filled up ?